Reg No B G 155 8-2-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿವಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ.
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ. 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಪ್ ಸಂಸ್ಥಾಪಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೊಪ್ಲಾಸ್ತಾನ್ ನಿರ್ಮಾಣ ನಿಂತಿತು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಲಾಯರುಗಳ ಪ್ರತಿಭಟನೆ

ಹೈದರಾಬಾದು— ರಾಜ್ಯದ ವಿವಿಧ ಭಾಗಗಳಲ್ಲಿ ಜೀವ ಮತ್ತು ಆಸ್ತಿಗಳಿಗೆ ಒದಗುತ್ತಿರುವ ಭೀತಿಯನ್ನು ಸರಕಾರ ತಪ್ಪಿಸಲಿರುವದನ್ನು ಪ್ರತಿಭಟಿಸಿ, ನುಚಲೀಪಟ್ಟಣ ಲಾಯರುಗಳೂ ಗುಸಾಸ್ತರೂ ನಿನ್ನೆ ಕೋರ್ಟಿಗೆ ಹೋಗಲಿಲ್ಲ.

ವಿದ್ಯಾರ್ಥಿಗಳ ವಿಷಯದಲ್ಲಿ

ಗುಲ್ಬರ್ಗ— ವಿದ್ಯಾರ್ಥಿಗಳಲ್ಲಿನ ನ್ಯಾಯವಿರುದ್ಧದ ಮತ್ತು ಆಶಿಸ್ತಿನ ನಡುವಳಿಕೆಯನ್ನು ಮಟ್ಟಹಾಕಲು ಈಗ ಸರಿಯಾದ ಕಾಲ ಬಂದಿರುವಹೆಂದೂ, ತಪ್ಪಿದರೆ ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ಒದಗುವುದೆಂದೂ ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಲಾಕಾಲೇಜು ಸಮಾರಂಭವ ಮುಕ್ತಾಯ ಭಾಷಣದಲ್ಲಿ ಹೇಳಿದರು.

●

ಆಹಾರ ಉತ್ಪಾನೆ

ನವದೆಹಲಿ— ನಾಲ್ಕನೇ ಯೋಜನೆಯಲ್ಲಿ ಆಹಾರ ಉತ್ಪಾದನೆ ಗುರಿ 130 ಆಥವಾ 132 ಎಂದು ಪ್ಲಾನಿಂಗ್ ಕಮಿಷನ್ ನಿರ್ಧರಿಸಿದೆ.

★

ಶೀಲಭಂಗಗೈದ ಆರೋಪ

ಕುಂದಾಪುರ ಸರ್ಕಾರಿ ಆಸ್ಪತ್ರೆಯ ಮೇಲ್ ನರ್ಸಿಂಗ್ ಆರ್ಡರ್ಲಿ ಶೀನಪ್ಪನು ಕೈ ಗಾಯಗಳ ಚಿಕಿತ್ಸೆಗೆಂದು ಒಳರೋಗಿಯಾಗಿದ್ದ ಸುಮಾರು 14 ವರ್ಷದ ಹುಡುಗಿಯೊಬ್ಬಳ ಶೀಲಭಂಗಗೈದ ಆರೋಪಕ್ಕಾಗಿ 3 ವರ್ಷ ಕಠಿಣಶಿಕ್ಷೆ ವಿಧಿಸಲಾಯ್ತು.

★

ಫೀಜೋ ಸೋದರಸೊಸೆ

ಕೊಹಿಮಾ— ಶಾಸನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಅಂಗಾಮಿ ವಿರುದ್ಧ ಫೀಜೋ ಸೋದರಸೊಸೆ ಸ್ಪರ್ಧಿಸಿರುವರು.

●

ಪೋಲೆಂಡಿನಲ್ಲಿ

ಪೋಲೆಂಡಿನಲ್ಲಿ ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ವಾರ್ಸಾದ ಒಂದು ಸ್ಕೂಲಿಗೆ ಗಾಂಧೀಜಿಯವರ ಹೆಸರನ್ನು ಇಡಲಾಗುವದು.

ಮೋಸಗಾರ ಸಿಕ್ಕಿಬಿದ್ದ

ಕೋಲಾರ— ರಾಮಪುರ ಗ್ರಾಮದಲ್ಲಿ ಒಂದು ಮದುವೆಯಲ್ಲಿ ಒಂದು ಮದುವೆಯಲ್ಲಿ ಶ್ರೀನಿವಾಸರೆಡ್ಡಿ ಎಂಬಾತನು ತನ್ನ ಹೆಂಡತಿಯೊಡನೆ ಸಹಾಯಮಾಡುವದಾಗಿ ಹೇಳಿ ಸೇರಿಕೊಂಡು, ವಧುವಿನ ರೂ. 2 ಸಾವಿರ ಬೆಲೆಯ ಭಂಗಾರದ ಸರವನ್ನು ಅಪಹರಿಸಿ ನೂರಲು ಪ್ರಯತ್ನಿಸುತ್ತಿದ್ದಾಗ ಬಂಧಿಸಲ್ಪಟ್ಟನು. 3 ತಿಂಗಳು ಕಠಿಣ ಸಜಾ ಹೆಧಿಸಲಾಯಿತು.

●

ಕ್ರಿ ಪೂ 3 ಶತಮಾನದ್ದು

ಭುವನೇಶ್ವರ— ಕಾಲಹಂದ್ರಿ ಜಿಲ್ಲೆಯಲ್ಲಿ ಕ್ರಿ ಪೂ ಮೂರು ಶತಮಾನಗಳ ಹಿಂದಿನ ಅಸುರಘಡ ಕೋಟೆ ಭೂಗರ್ಭ ಶೋಧನೆಯಲ್ಲಿ ಪತ್ತೆಗಿದೆ ; ಅನೇಕ ನಾಣ್ಯಗಳೂ ಸಿಕ್ಕಿವೆ.

●

ಶ್ರೀ ಶೃಂಗೇರಿ ಜಗದ್ಗುರುಗಳವರು

ರಾಣಿಪೇಟೆ— ಮದರಾಸಿಗೆ ಹೋಗುವ ಮಾರ್ಗದಲ್ಲಿ ಬುಧವಾರ ತಂಗಿದ ಶ್ರೀ ಶೃಂಗೇರಿ ಜಗದ್ಗುರುಗಳವರು ಅಣ್ಣಾದೊರೈರ ಆತ್ಮಶಾಂತಿಗಾಗಿ ಪ್ರಾರ್ಥನೆ ನಡೆಸಿದರು. ಪೂಜೆಗೆ ಮುಂಚೆ— ಒಳ್ಳೇ ಸರಕಾರವನ್ನಿತ್ತಿದ್ದ ಮತ್ತು ಇನ್ನೂ ಎಷ್ಟೋ ಒಳ್ಳೇ ಕೆಲಸ ಮಾಡಲಿದ್ದ ಅಣ್ಣಾದೊರೈರವರ ನಿಧನವು ತಮಗೆ ತುಂಬಾ ವ್ಯಸನ ಉಂಟು ಮಾಡಿದೆಯೆಂದು ಹೇಳಿ, ಅವರು ಜೀವಂತರಾಗಿದ್ದಾಗ ಅವರ ಆರೋಗ್ಯಕ್ಕೆ ಪ್ರಾರ್ಥಿಸುತ್ತಿದ್ದಂತೆ, ಈಗ ಅವರ ಆತ್ಮ ಶಾಂತಿಗಾಗಿ ಪ್ರಾರ್ಥಿಸೋಣ, ಎಂದು ತಿಳಿಸಿದರು.

★

ನವದೆಹಲಿ— ರೈಲ್ವೇ ದರದ ಏರಿಕೆಯ ಸಂಭವವಿಲ್ಲವೆಂದು ಪ್ರಕಟವಾಗಿದೆ.

ಮಾಲಾಪುರ ಜಿಲ್ಲೆ ಇಲ್ಲ

ತ್ರಿವೇಂಡ್ರಂ— ಮಾಲಾಪುರ ಜಿಲ್ಲೆ (ಮಾಪ್ಲಾಸ್ತಾನ್) ನಿರ್ಮಾಣದ ವಿಷಯ ನಿಲ್ಲಿಸಲಾಗಿದೆಯೆಂದೂ, ಮತೀಯ ಹುಚ್ಚಿಗೆ ಹೆಚ್ಚು ಅವಕಾಶ ಕೊಟ್ಟಂತಾಗುವದೆಂದೂ, ಮಂತ್ರಿಮಂಡಲ ಕೊಚ್ಚಿಹೋಗಬಹುದೆಂದೂ ಮುಖ್ಯ ಮಂತ್ರಿ ನಂಬೂದರಿಪಾದರು ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ.

●

ಕೋಟಾ ಡಬ್ಬಲ್

ಮಂಗಳೂರು— ರಾಜ್ಯದಲ್ಲಿ ಗೋಧಿ, ಜೋಳ, ಮಿಲೋ ಸಾಕಷ್ಟು ದಾಸ್ತಾನಿರುವುದರಿಂದ ರೇಷನ್ ಎರಡರಷ್ಟು ಕೊಡಲಾಗುವುದೆಂದು ಆಹಾರ ಮಂತ್ರಿ ಶ್ರೀ ವಿಠಲ್ ದಾಸ್ ಶೆಟ್ಟಿಯವರು ಹೇಳಿರುವರು.

○

ಹೆಣ್ಣು ವೇಷದ ಗಂಡು

ಹೈದರಾಬಾದು— ಮಹಿಳೆಯಂತೆ ವೇಷ ಧರಿಸಿ, ಹುಡುಗಿಯರನ್ನು ಪೀಡಿಸುತ್ತಿದ್ದ 18 ವರ್ಷದ ವಹೀದ ಎಂಬ ಒಂದು ಮನೆಯ ಆಳು ಬಂಧಿಸಲ್ಪಟ್ಟನು.

○

ಹುಡುಗಿ ವೇಷದ ಕಳ್ಳ

ಹಾಂಕಾಂಗ್— ಹುಡುಗಿ ವೇಷ ಧರಿಸಿ ರೂ 12600 ಬೆಲೆಯ ಪದಾರ್ಥಗಳನ್ನು ಕಳುವು ಮಾಡಿದ್ದ ಓ ಚಿ ವೈ ಎಂಬುವನಿಗೆ ತರಬೇತಿ ಕೇಂದ್ರದಲ್ಲಿ ಅನಿರ್ದಿಷ್ಟ ಕಾಲ ಶಿಕ್ಷೆ ವಿಧಿಸಲಾಗಿದೆ.

★

ಕಸದ ಬುಟ್ಟಿಗೆ ಹೋಗುತ್ತೆ

ಮದರಾಸು— ಮದರಾಸು ಸರಕಾರ ಮತ್ತಿತರರಿಗೆ ಬರುವ ಹಿಂದಿ ಕಾಗದಪತ್ರಗಳು ಕಸದಬುಟ್ಟಿಗೆ ಹೋಗುವುದೆಂದು ರಾಜಾಜಿ ಸ್ವರಾಜ್ಯ ಪತ್ರಿಕೆಯಲ್ಲಿ ಬರೆದಿರುವರು.

ಶ್ರೀ ಮಹಾಶಿವರಾತ್ರಿ ಮಹೋತ್ಸವ

ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ತಾ || 14 ಶುಕ್ರವಾರದಿಂದ 16 ಭಾನುವಾರ ಪೂರ್ತಾ ಶ್ರೀ ಮಹಾಶಿವರಾತ್ರಿ ಮಹೋತ್ಸವವು ಆಚರಿಸಲಾಗುವುದು. "

ಪೌರಸಭೆಯಸಂಯುಕ್ತ ರಂಗ ಪಕ್ಷ

ಮೈಸೂರು— ಪೌರಸಭೆಯ ಸಂಯುಕ್ತ ರಂಗ ಪಕ್ಷಕ್ಕೆ ಶ್ರೀಗಳಾದ ಬಿ. ಎಸ್. ಯೆಂಗೇಗೌಡರು ಲೀಡರ್, ಶ್ರೀಕಂಠಶೆಟ್ಟರು ಡೆಪ್ಯೂಟಿ ಲೀಡರ್, ವೇದಾಂತ್ ಹೆಮ್ಮಿಗೆರು ಸೆಕ್ರೆಟರಿ, ಚೌಡಯ್ಯರು ಟ್ರೆಷರರ್, ಎಂ. ಕೆ. ಲಿಂಗಯ್ಯರು ವ್ಹಿಪ್ ಆಗಿ ಚುನಾಯಿಸಲ್ಪಟ್ಟಿರುವರು.

ಪ್ರಧಾನಿಯವರ ಅಧ್ಯಕ್ಷತೆ

ಮದ್ದೂರು - ಆಣಾದೊರೈರ ನಿಧನದ ಬಗ್ಗೆ ತಾ || 8 ರಂದು ಮೆರಿನಾದಲ್ಲಿ ನಡೆಯುವ ಶರೀಫ್‌ರು ಏರ್ಪಡಿಸಿರುವ ಸಂತಾಪ ಸೂಚಕ ಸಭೆಯ ಅಧ್ಯಕ್ಷತೆಯನ್ನು ಪ್ರಧಾನಿ ಇಂದಿರಾರವರು ವಹಿಸುವರು.



Help The Gorakshana

SHAKTI SUDHA

A Superb Tonic

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳನ್ನು ಸಿಗುವ ಏಕೈಕ ಸ್ಥಳ

Protect the Cow

ವುಡ್‌ಲ್ಯಾಂಡ್ಸ್ 7–2–69 ರಿಂದ

.... ಮನಮೋಹಕ ಹಿಂದಿ ಚಿತ್ರ ....

ದಿವಾನ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯದ
ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ– ಶಂಕರ್ ಜೈಕಿಷನ್ ಡೈರೆಕ್ಷನ್– ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಅಪೆದಾ— ಜನಪ್ರಿಯ 3 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore-4.

Edited, Printed & Published by Dharmaprachara Niratta M S Krishna Rao (Proprietor) at the Satyavad Press Chamarajapuram. Mysore 4